ಈಕೆ ಮದುವೆಯಾಗಿ ಇಲ್ಲಿಗೆ ಬಂದಾಗ ತಮ್ಮ ಮನೆ ಬಾಗಿಲಿನಲ್ಲಿ ಸಿದ್ದೆ ಹಾಲಿಗಾಗಿ ಪಾತ್ರೆ ಹಿಡಿದು ನಿಲ್ಲುತ್ತಿದ್ದವರು. ಹಿಡಿ ಸಕ್ಕರೆಗಾಗಿ, ಕಾಫಿ ಪುಡಿಗಾಗಿ ತಟ್ಟೆ ಹಿಡಿದು ಬರುತ್ತಿದ್ದವರು ಇವತ್ತು ತಮಗಿಂತ ಬಹಳ ಮೇಲಿದ್ದಾರೆ. ತಮ್ಮದೇ ಗದ್ದೆಗಳನ್ನು ಗೇಣಿಗೆ ಮಾಡಿಕೊಂಡಿದ್ದವರು ಈಗ ಅವನ್ನು ಸ್ವಂತದ್ದಾಗಿಸಿಕೊಂಡು ಶ್ರೀಮಂತರಾಗಿದ್ದಾರೆ. 'ಅಪ್ಪ ಮನೆಯಲ್ಲೇ ಇದ್ದಿದ್ದರೆ ನಾವೂ ಹಾಗೇ ಇರಬಹುದಿತ್ತು ಅಲ್ಲವೇನಮ್ಮ' ಎಂದೂ ಕೇಳುತ್ತಾವೆ ಮಕ್ಕಳು. ಆಗ ಅನ್ನಿಸುತ್ತದೆ ಆಕೆಗೆ 'ಈಗಲಾದರೂ ಮನೆಯ ಯಜಮಾನ ಇರಬೇಕಿತ್ತು' ಎಂದು. ಈಗಲೂ ತಡವಾಗಿಲ್ಲ. ಗಂಡ ತನ್ನ ಚಾಳಿಯನ್ನು ಬದಲಿಸಿ ಮನೆಯಲ್ಲೇ ಉಳಿಯುವಂತಾದರೆ ಮನೆಯ ವ್ಯವಹಾರವನ್ನು ಅಷ್ಟಿಷ್ಟು ನೋಡಿಕೊಳ್ಳುವ ಮನಸ್ಸು ಮಾಡಿದರೆ ಈ ಮಕ್ಕಳ ಕಣ್ಣಲ್ಲಿ ತುಳುಕುವ ಆಸೆ ಈಡೇರಿಸಬಹುದೇನೋ ಅನ್ನಿಸುತ್ತಿತ್ತು.

ಮಳೆ ಬಿಟ್ಟು ಬಿಟ್ಟು ಬರುತ್ತಿತ್ತು. ಬಂದರೆ ಕಣ್ಣು ಮುಚ್ಚಿ ಸುರಿಯುತ್ತಿತ್ತು. ಮಾವ ಇದ್ದಾಗ ಅಕ್ಕಿ ಕೋಣೆಯಲ್ಲಿ ಅಕ್ಕಿ, ಬೇಳೆ, ಮೆಣಸು, ಬೆಲ್ಲ ದೊಡ್ಡ ದೊಡ್ಡ ಡಬ್ಬಗಳಲ್ಲಿ ಚೆಲ್ಲುವಷ್ಟು ತುಂಬಿಸಿಟ್ಟದ್ದು ಒಂದು ಮಳೆಗಾಲವೇನು ಎರಡೆರಡು ಮಳೆಗಾಲಕ್ಕೆ ಸಾಕಾಗುವಷ್ಟು ಇರುತ್ತಿತ್ತು. ಮಳೆಗಾಲ ಕಳೆದ ಕೂಡಲೇ ಇನ್ನೂ ಇಟ್ಟರೆ ಹಾಳಾಗುತ್ತದೆಂದು ಉಳಿದದ್ದನ್ನೆಲ್ಲ ಬಿಸಿಲಿಗೆ ಹಾಕಿ ಮನೆಗೆಲಸಕ್ಕೆ ಬರುತ್ತಿದ್ದವರನ್ನು ಕರೆದು ಎಲ್ಲವನ್ನೂ ಹಂಚಿ ಬಿಡುತ್ತಿದ್ದರು ಅತ್ತೆ. ಈಗ ಹಾಗೆ ತುಂಬಿಸಿಡುವುದು ಹೋಗಲಿ ದಿನದ ಬಳಕೆಗೆ ಬೇಕಾದದ್ದನ್ನು ಅದೇ ದಿನ ತರಬೇಕು. ಮಳೆ ಜಾಸ್ತಿ ಬಂದು ಹೊಳೆ ದಾಟಲಿಕ್ಕಾಗಲಿಲ್ಲವೆಂದಾದರೆ ಆವತ್ತು ಉಪ್ಪು ಹುಳಿಗೂ ತತ್ವಾರ. ಮಾರನೆಯ ದಿನ ಬರೀ ಉಪ್ಪಿಲ್ಲದ ಗಂಜಿಯೇ ಗತಿ. ಬಡತನಕ್ಕೂ ಹೆದರಿದವಳಲ್ಲ ವಾಗ್ದೇವಿ. ಮದುವೆಗೆ ಮುಂಚೆ ಅಪ್ಪನ ಮನೆಯಲ್ಲಿ ಇದಕ್ಕಿಂತ ಬಡತನದ ದಿನಗಳನ್ನೂ ನೋಡಿದ್ದಳಾಕೆ. ಆದರೆ ಆಗ ತನ್ನದೇ ಆದ ಮಕ್ಕಳಿರಲಿಲ್ಲವಲ್ಲ. ಒಂದು ಕಾಲದಲ್ಲಿ ಸಮೃದ್ಧವಾಗಿದ್ದು ಬಂದು ಬಂದವರಿಗೆ ಬೇಕಾದಷ್ಟು ಕೊಟ್ಟು ಉಣ್ಣುತ್ತಿದ್ದ ಮನೆಯಲ್ಲಿ ತನ್ನದೇ ಕರುಳ ಕುಡಿಗಳು ಹೊಟ್ಟೆತುಂಬ ಊಟಕ್ಕಾಗಿ ಪರದಾಡಬೇಕಾದಂತಹ ಪರಿಸ್ಥಿತಿ ಬಂದದ್ದು ಆಕೆಗೆ ನುಂಗಲಾರದ ತುತ್ತಾಗಿತ್ತು.

ಮಳೆ ಸ್ವಲ್ಪ ಹಿಂದಾದ ದಿನ ಯಾರು ಯಾರ ಹತ್ತಿರವೋ ಗೋಗರೆದು ಮರ ಹತ್ತಿಸುತ್ತಿದ್ದಳು. ಹಣ್ಣಾದ ತೆಂಗಿನ ಕಾಯಿಯನ್ನು ಕೀಳಿಸಬೇಕಲ್ಲ. ಅದೊಂದು ಐವತ್ತಾದರೂ ಸಿಕ್ಕಿದರೆ ಒಂದೆಂಟು ದಿನಗಳ ಖರ್ಚಿಗಾದರೂ ಆಗುತ್ತದೆ. ಅದರಲ್ಲೂ ಮರ ಹತ್ತುವವರು ಒಂದಕ್ಕೆರಡು ಮಜೂರಿ ಕೇಳುತ್ತಾರೆ. ಮರ ಜಾರುತ್ತದೆ. ಈ ಸಮಯದಲ್ಲಿ ಮರ ಹತ್ತುವುದು ಡೇಂಜರ್ ಎಂದು ಇವಳಿಗೆ ಏನೂ ತಿಳಿಯದು ಎನ್ನುವಂತೆ ಹೇಳುತ್ತಾರೆ. ಅಸಹಾಯಕತೆ ಮತ್ತು ಅನಿವಾರ್ಯತೆ ಅವರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನಿರುವಂತೆ ಮಾಡುತ್ತದೆ. ಮರವೊಂದಕ್ಕೆ ಹತ್ತು ರೂಪಾಯಿ ಕೊಡಬೇಕೆಂದರೂ ಕೊಡಲೇಬೇಕು. ಇಲ್ಲವೆಂದರೆ ಅದೂ ಇಲ್ಲವಲ್ಲ. ಹಣ್ಣಾಗಿ ಒಣಗಿದ ಕಾಯಿ ಬಿದ್ದರೆ ಕಂಡವರ ಪಾಲು. ಕೆಲವೊಮ್ಮೆ ಮರವೊಂದಕ್ಕೆ ಒಂದೇ ಕಾಯಿ ಸಿಗುವುದೂ ಇದೆ. ಅಂತಹ ಮರ ಹತ್ತಿದರೂ ಹತ್ತು ರೂಪಾಯಿ. ಲೆಕ್ಕ ಲೆಕ್ಕವೇ ಅಲ್ಲವೇ. ಆ ಒಂದು ಕಾಯಿಯನ್ನು ಮಾರಾಟ ಮಾಡಿದರೆ ಸಿಗುವುದು ನಾಲ್ಕೋ ಐದೋ ರೂಪಾಯಿ. ಹದಿಮೂರು ಹದಿನಾಲ್ಕು ವರ್ಷದ ಮಕ್ಕಳು ಹೇಳುತ್ತಾವೆ: 'ಅಮ್ಮ ನಾವೇ ಮರ ಹತ್ತಿ ಕಾಯಿ ತೆಗೆಯುತ್ತೇವೆ. ಅವನಿಗೆ ಕೊಡುವ ಹಣ ನಮಗೇ ಉಳಿಯುತ್ತಲ್ಲ...' ಎಂದರೆ ಅವನ್ನು ತಬ್ಬಿಕೊಂಡು ಅಳುವುದಷ್ಟೇ ಆಕೆಯಿಂದಾಗುವ ಕೆಲಸ. ಮಕ್ಕಳನ್ನು ಮಳೆಗಾಲದಲ್ಲಿ ಮರ ಹತ್ತುವ ಕೆಲಸದಂತಹ ಅಪಾಯಕ್ಕೆ ಒಡ್ಡಲು ಆಕೆ ಸುತರಾಂ ತಯಾರಿರಲಿಲ್ಲ.